ಕರ್ನಾಟಕ ವಿಧಾನಸಭೆ

ಗುರುವಾರ 11ನೇ ಜುಲೈ 2002 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶಾಸನ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ವರ್ಗದ ತಾಂಡಗಳ ಅಭಿವೃದ್ಧಿಗೆ

1. ಕೇಂದ್ರ ಸರ್ಕಾರದ ಅನುದಾನದಿಂದ ಪರಿಶಿಷ್ಟ ವರ್ಗದ ತಾಂಡವ ಅಭಿವೃದ್ಧಿ ಪಡಿಸಲು ಹಾಸನ ವಿಧಾನ ಸಭಾ ಕ್ಷೇತ್ರದ ತಾಂಡಗಳಾದ ಹಿರೇಗೌಡನಹಳ್ಳಿ ಹಾಗೂ ಜಾಗರಹಳ್ಳಿ ಗ್ರಾಮಗಳಿಗೆ ಬೇಕಾಗುವ ಅಭಿವೃದ್ಧಿ ಕೆಲಸಗಳ ಪಟ್ಟಿ ಮಾಡಿ ಅಂದಾಜು ತಯಾರಿಸಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸುವಂತೆ ಕಳೆದ ವರ್ಷವೇ ತಿಳಿಸಲಾಗಿದ್ದರೂ ಸಹ ಈ ಅಧಿಕಾರಿ ಸರ್ಕಾರಕ್ಕೆ ವರದಿ ಸಲ್ಲಿಸದಿರಲು ಕಾರಣವೇನು ?

2. ಕಾಮಗಾರಿ ಮಂಜೂರಾಗಿದ್ದರೆ ಕಾಮಗಾರಿಗಳು ಪ್ರಾರಂಭವಾಗಿರುವುದೆ ತಿಳಿಸುವುದು ?

3. ತಾಂಡಗಳಲ್ಲಿ ಎಷ್ಟು ಕುಟುಂಬಗಳಿವೆ ತಿಳಿಸುವುದು.

1. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಹಾಸನ ಇವರು ಪತ್ರ ಸಂ: ಜಿಎಸಕಅ ಸಿಆರ್-15 2001-02 ದಿನಾಂಕ: 26.2.2002ರಲ್ಲಿ ಹಾಸನ ತಾಲ್ಲೂಕು ಜಾಗರವಳ್ಳಿ ಗ್ರಾಮದ ಅಭಿವೃದ್ಧಿಗೆ ರೂ. 11.12 ಲಕ್ಷ ಮತ್ತು ಹಿರೇಗೌಡನಹಳ್ಳಿ ಗ್ರಾಮದ ಅಭಿವೃದ್ಧಿಗೆ ರೂ. 14.79 ಲಕ್ಷಗಳ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಕಾಮಗಾರಿಗಳ ಅಂದಾಜು ಪಟ್ಟಿಗಳು ಮಾರ್ಚ್ 2002ರ ಮಾಹೆಯಲ್ಲಿ ಸ್ವೀಕೃತಿಯಾಗಿರುವುದರಿಂದ 2001-02ನೇ ಸಾಲಿನಲ್ಲಿ ಮಂಜೂರಾಗಿರುವುದಿಲ್ಲ.

3. ಹಿರೇಗೌಡನಹಳ್ಳಿಯಲ್ಲಿ 47 ನಾಯಕ ಜನಾಂಗದ ಕುಟುಂಬಗಳು ಮತ್ತು ಜಾಗರಹಳ್ಳಿಯಲ್ಲಿ 93 ನಾಯಕ ಜನಾಂಗದ ಕುಟುಂಬಗಳು ವಾಸವಾಗಿರುತ್ತಾರೆ.

ಶ್ರೀ ಕೆ.ಹೆಚ್ ಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ಹಿರೇಗೌಡನಹಳ್ಳಿ ಮತ್ತು ಜಾಗರಹಳ್ಳಿ ಇವೆರಡೂ ಕುಗ್ರಾಮಗಳು. ಜಾಗರಹಳ್ಳಿ ಹಾಸನ ಪಟ್ಟಣದಿಂದ 25 ಕಿ.ಮೀ. ದೂರದಲ್ಲಿದೆ. ಅದು ಬೆಟ್ಟಗುಡ್ಡಗಳ ಪ್ರದೇಶವಾಗಿದೆ. ಅಲ್ಲಿ ಫಲವತ್ತಾದ ಭೂಮಿ ಇಲ್ಲ, ಮಳೆ ಇಲ್ಲ, ಅದು ಒಂದು ಬೆಂಗಾಡಾಗಿದೆ. ಆ ತಾಂಡಾದ ಜನ ದಮ ಕುರಿಗಳನ್ನು ಸಾಕಿಕೊಂಡು ಜೀವನ ಮಾಡುತ್ತಾರೆ. ಅವರು ಬಹಳ ಬಡತನದಲ್ಲಿ ಬದುಕುತ್ತಾ ಇರತಕ್ಕಂಥ ಊರು ಅದು.

ಹಿರೇಗೌಡನಹಳ್ಳಿ ಹಾಸನದಿಂದ 20 ಕಿ.ಮೀ. ದೂರದಲ್ಲಿದೆ. ಅಲ್ಲೂ ಕಡು ಬಡವರು ವಾಸಿಸುತ್ತಾರೆ. ಅಲ್ಲಿ ಸರಿಯಾದ ಮನೆಗಳಿಲ್ಲ ಮತ್ತು ಯಾವುದೇ ವ್ಯವಸ್ಥೆಗಳಿಲ್ಲ. ಇಂತಹ ಎರಡು ಹಳ್ಳಿಗಳು ಇವೆ. ಎರಡು ವರ್ಷಗಳ ಹಿಂದೆ ಸಂಬಂಧಪಟ್ಟ ಆಫೀಸರ್‌ಗಳನ್ನು ನಾನೇ ಊರಿಗೆ ಕರೆದುಕೊಂಡು ಹೋಗಿ, ಜನಗಳನ್ನೆಲ್ಲಾ ಕೆಲೆ ಹಾಕಿ, ಅಲ್ಲಿಗೆ ಏನೇನು ಅಭಿವೃದ್ಧಿ ಕೆಲಸಗಳು ಆಗಬೇಕಾಗಿದೆಯೋ ಅದರ ಬಗ್ಗೆ ಎಸ್ಟಿಮೇಟ್ ಮಾಡಿ ತಾಲ್ಲೂಕು ಪಂಚಾಯಿತಿಗೆ ಕಳುಹಿಸಿಕೊಟ್ಟಿದೆ. ಜಿಲ್ಲಾ ಪಂಚಾಯಿತಿಯಲ್ಲಿ ಕೇಳಿದರೆ ಅವರು ಬೆಂಗಳೂರಿಗೆ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಸಂಬಂಧಪಟ್ಟ ಡೈರೆಕ್ಟರ್ ಆಫೀಸ್‌ಗೆ ಹೋಗಿ ಕೇಳಿದರೆ, ಅದು ಇನ್ನೂ ಬಂದಿಲ್ಲ ಎಂದು ಹೇಳಿದರು. ಮತ್ತೆ ಪುನಃ ಅಲ್ಲಿಗೆ ಹೋಗಿ ಕೇಳಿದೆ. ಕೊನೆಗೆ ಮಂತ್ರಿಗಳಾಗಿದ್ದ ಮಾನ್ಯ ಕಾಗೋಡು ತಿಮ್ಮಪ್ಪನವರು ಬಳಿಗೆ ಹೋಗಿ ವಿಚಾರಿಸಿದೆ. ಬಡವರು ಅಸಹಾಯಕ ಗಿರಿಜನರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನು ಖರ್ಚು ಮಾಡುವುದಕ್ಕೆ ಇಷ್ಟೊಂದು ನಿಧಾನವಾಗಿ ಆ ಬಡಜನರಿಗೆ ಅನ್ಯಾಯವಾಗುತ್ತಿದೆ ಎಂದು ನಾನು ಅವರಿಗೂ ಹೇಳಿದೆ. ನಾನು ಇಮ್ಮೀಡಿಯೇಟ್ ಆಗಿ ತರಿಸುತ್ತೇನೆ ಎಂದು ಹೇಳಿದರು. ಆದರೂ ಅವರು ಕಳುಹಿಸಲಿಲ್ಲ. ಈ ಬಗ್ಗೆ ಇಲ್ಲಿ ಕೊಶ್ಚೆನ್ ಕಳುಹಿಸಿದ ಮೇಲೆ ಈಗ ಮೊನ್ನೆಯ ದಿನ ಅದನ್ನು ಕಳುಹಿಸಿಕೊಟ್ಟಿರುವಂತೆ ಕಾಣುತ್ತದೆ. ಇಷ್ಟರ ಮಟ್ಟಿಗೆ ಅಧಿಕಾರಿಗಳು ತಾತ್ಸಾರ ಮಾಡಿದರೆ ಬಡವರು ಮತ್ತು ಅಸಹಾಯಕ ಗಿರಿ ಜನರು ಅಭಿವೃದ್ಧಿಗೆ ಬರುವುದಾದರೂ ಹೇಗೆ ? ಕೇಂದ್ರ ಸರ್ಕಾರದಿಂದ ಅನುದಾನದ ಹಣ ಬರುವುದೇ ಅಪರೂಪ. ಅಂಥಾದ್ದರಲ್ಲಿ ಬಂದಂತಹ ಹಣವನ್ನೂ ಕೂಡ ಅಧಿಕಾರಿಗಳು ಖರ್ಚು ಮಾಡದೇ ಜನಗಳಿಗೆ ದ್ರೋಹ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಇಲಾಖಾ ಇಂತಹ ಉದಾಸೀನ ಮಾಡತಕ್ಕಂಥ ಪ್ರವೃತ್ತಿ ಇರುವ ಅಧಿಕಾರಿಗಳ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು. ಇದನ್ನು ಯಾವಾಗ ಮಂಜೂರು ಮಾಡಿ, ಎಷ್ಟು ದಿವಸದೊಳಗಾಗಿ ಕಂಪ್ಲೀಟ್ ಮಾಡಿಕೊಡುತ್ತೀರಾ ?

ಶ್ರೀ ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೇ, ಈ ಎಸ್ಟಿಮೇಟ್ ಈ ವರ್ಷದಲ್ಲಿ ನಮಗೆ ಬಂದಿದೆ. ಇದರಲ್ಲಿ ತಡ ಏತಕ್ಕೆ ಆಯಿತು? ಹೇಗಾಯಿತು? ಯಾರು ನಿರ್ಲಕ್ಷ್ಯ ಮಾಡಿದ್ದಾರೆ ಎಂಬ ಬಗ್ಗೆ ಮಾನ್ಯ ಸದಸ್ಯರು ಬಹಳ ಡೀಟೈಲಾಗಿ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳಬಯಸುತ್ತೇನೆ. ಇದನ್ನು ವಿವರವಾಗಿ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ. ನಾನು ಅರ್ಜೆಂಟಾಗಿ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ನಮ್ಮ ಇಲಾಖೆ ಕಡೆಯಿಂದ ಆದೇಶವನ್ನು ಕಳುಹಿಸುತ್ತೇನೆ.

ಶ್ರೀ ಕೆ.ಹೆಚ್ ಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ಹೋದ ವರ್ಷದ ಸೆಂಟ್ರಲ್ ಗೌವರ್ನಮೆಂಟ್ ಗ್ರಾಂಟ್ಸ್ ಲ್ಯಾಪ್ಸ್ ಆಯಿತು. ಈ ವರ್ಷದ ಗ್ರಾಂಟ್ಸ್ ಆದರೂ ಲ್ಯಾಪ್ಸ್ ಆಗದ ಹಾಗೆ ನೀವು ಆ ಅಸಹಾಯಕ ಮುಗ್ಧ ಜನಗಳಿಗೆ ಒಳ್ಳೆಯ ಕೆಲ, ಮಾಡಿಕೊಡಿ. ಹಾಗೆ ಮಾಡಿದರೆ ನಾನು ನಿಮಗೆ ಮತ್ತು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಎ ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ, ಈ ಕೆಲಸವನ್ನು ಅರ್ಜೆಂಟಾಗಿ ನಾವು ತೆಗೆದುಕೊಳ್ಳುತ್ತೇವೆ. ಅದು ಜಿಲ್ಲಾ ಪಂಚಾಯತ್‌ನಿಂದ ನಮಗೆ ಬರಬೇಕಾಗಿತ್ತು.

ಜಿಲ್ಲಾ ಪಂಚಾಯತ್‌ನವರು ಸರಿಯಾಗಿ ರೆಸ್ಪಾಂಡ್ ಮಾಡುತ್ತಾರೋ ಬಿಡುತ್ತಾರೋ ? ಆದರೆ ಮಾನ್ಯ ಸದಸ್ಯರು ಇಲ್ಲಿ ವ್ಯಕ್ತಪಡಿಸಿರುವ ಕಳಕಳಿ ಏನಿದೆ ಅದು ಸರ್ಕಾರಕ್ಕೆ ಅರ್ಥವಾಗಿದೆ. ನಾವು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಮೈಸೂರು ನಗರದಲ್ಲಿ ಕೈಗೊಂಡಿರುವ ಕೈಗಾರಿಕಾಭಿವೃದ್ಧಿ ಕಾರ್ಯಕ್ರಮಗಳು

32(137): ಶ್ರೀ ಹೆಚ್.ಎಸ್. ಶಂಕಲಿಂಗೇಗೌಡ (ಚಾಮರಾಜ) : ಮಾನ್ಯ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೈಸೂರು ನಗರದಲ್ಲಿ ಕೈಗಾರಿಕಾ ಅಭಿವೃದ್ಧಿ ಬಗ್ಗೆ ಸರ್ಕಾರ ಇದುವರೆವಿಗೆ ಕೈಗೊಂಡಿರುವ ಕ್ರಮಗಳು ಯಾವುವು ?

ಆ. ಈ ಕುರಿತು ಸರ್ಕಾರದ ಉದ್ದೇಶ ಈಡೇರಿಕೆಯೇ ?

ಇ. ನಗರದಲ್ಲಿ ಕೈಗಾರಿಕಾ ಅಭಿವೃದ್ಧಿ ಬಗ್ಗೆ ಸರ್ಕಾರದ ಮುಂದಿನ ಯೋಜನಗಳೇನು

ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ಮೈಸೂರು ನಗರದಲ್ಲಿ ಹೊಸ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ಹೋಬಳಿ:ತಾಲ್ಲೂಕು ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಅವು ಯಾವುವೆಂದರೆ ಕೈಗಾರಿಕಾ ತಿಳುವಳಿಕೆ ಸಭೆಗಳು ಮಹಿಳೆಯಾರಿಗಾಗಿ ಕೈಗಾರಿಕಾ ತಾಂತ್ರಿಕ ತರಬೇತಿಗಾಗಿ, ಯಶಸ್ವಿನಿ ಯೋಜನೆಯನ್ನು ಮತ್ತು ಡಿಫೆನ್ಸ್ ಪುರ್ ರಿಸರ್ಚ್ ಲ್ಯಾಬೋರೇಟರಿ ಸಹಯೋಗದೊಂದಿಗೆ 4 ವಾರಗಳ ಉದ್ಯಮ ಶೀಲತಾ ತರೇತಿ ಕೆಐಎಬಿ ಮತ್ತು ಕೆಎಸ್‌ಎಸ್‌ಐಡಿಸಿ ವತಿಯಿಂದ ಕ್ರಮವಾಗಿ ನಿವೇಶನ ಹಾಗೂ ಮಳಿಗೆಗಳನ್ನು ನಿಯಮಾವಳಿಯಂತೆ ಹಂಚಿಕೆ ಮಾಡುವರು. ಇಲಾಖೆಯಿಂದ ಆಗುವ ತೊಂದರೆಗಳನ್ನು ನಿವಾರಿಸುವುದು.

ಹೊಸ ಕೈಗಾರಿಕಾ 2001ರ ನೀತಿಯಂತೆ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಭೂ ಪರಿವರ್ತನೆ ಶುಲ್ಕ, ನೊಂದಣಿ ಶುಲ್ಕ, ವಿನಾಯಿತಿ ಕಾರ್ಖಾನೆಗೆ ಬರುವ ಕಚ್ಚಾ ಮಾಲುಗಳ ಪ್ರವೇಶ ತೆರೆಗೆ ರಿಯಾಯಿತಿ ಘಟಕಗಳು ಮಾಡಿರುವ ಬಂಡವಾಳದ ಮೇಲೆ ರಾಜ್ಯ ಸಹಾಯಧನ ಶೇ.10 ರಂತೆ ಹಾಗೂ ಮಹಿಳೆಯರಿಗೆ ಎಸ್‌ಸಿ:ಎಸ್‌ಟಿ ರವರಿಗೆ ಶೇ. 15 ರಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

ಆ. ಮೈಸೂರು ನಗರದಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಅತ್ಯುತ್ತಮ ಅವಕಾಶಗಳಿದ್ದು, ಸರ್ಕಾರವು ಹೆಚ್ಚು ಕೈಗಾರಿಕೆಗಳನ್ನು ಮೈಸೂರಿನಲ್ಲಿ ಆಕರ್ಷಿಸಲು ತೆಗೆದುಕೊಳ್ಳುತ್ತಿರುವ ಕ್ರಮವನ್ನು ಮುಂದುವರಿಸುತ್ತದೆ.

ಇ. ಮೈಸೂರು ಜಿಲ್ಲೆ ಕೈಗಾರಿಕಾ ಅಭಿವೃದ್ಧಿಗೆ ಮುಂದಿನ 5 ವರ್ಷಗಳಿಗೆ ಅಂದರೆ 2001-06ರ ಮುನ್ನೋಟ ಯೋಜನೆ ತಯಾರಿಸಲಾಗಿದೆ. ಈ ಯೋಜನೆಯ ಆಧಾರದ ಮೇಲೆ ಕೈಗಾರಿಕಾ ಬಂಡವಾಳ ಹೂಡಿಕೆದಾರರ ಸಮಾವೇಶ, ಹೊಸ ಉದ್ದಿಮೆದಾರರನ್ನು ಪ್ರೇರೇಪಿಸಲು ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ ಮತ್ತು ಪ್ರೇರಣಾ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.